ಬೆಲ್ಜಿಯಂನ ಹಜಾರ್ಡ್



ಜಪಾನ್‌ನ ಒಸಾಕೊ





ಬ್ರೆಜಿಲ್‌ನ ಫಿಲಿಪ್ ಕುಟ್ಹಿನೊ

ಲೂಕಾನನ್ನು ಎದೆಗವಚಿಕೊಂಡ ಅಪ್ಪ–ಅಮ್ಮ ಮತ್ತು ಕುಟುಂಬವು 40 ಕಿಲೋಮೀಟರ್ ದೂರದ ಜದಾರ್ ಪಟ್ಟಣ ಸೇರಿಕೊಂಡಿತು. ಅಲ್ಲಿ ನಿರಾಶ್ರಿತರ ಶಿಬಿರದಲ್ಲಿ ಲೂಕಾ ಫುಟ್‌ಬಾಲ್ ಮೋಡಿ ಗರಿಗೆದರಿತು. ಫುಟ್‌ಬಾಲ್ ಆಟದ ತಲ್ಲೀನತೆ ರಕ್ತಪಾತ, ಸ್ಫೋಟದ ಭೀಕರತೆಗಳನ್ನು ಮನಸ್ಸಿನಿಂದ ಅಳಿಸಿ ಹಾಕಿತು. ಬೆಜ್ಲೋ ಅಕಾಡೆಮಿಯಲ್ಲಿ ಲೂಕಾ ಜೀವನ ಹೊಸ ತಿರುವು ಪಡೆಯಿತು.

## ಇಂಗ್ಲೆಂಡ್ ನವತಾರೆ ಹ್ಯಾರಿ ಕೇನ್

ಚಿನ್ನದ ಬೂಟು ಪ್ರಶಸ್ತಿ ಪಡೆಯುವವರ ರೇಸ್‌ನಲ್ಲಿ ನಿರಂತರ ಅಗ್ರಸ್ಥಾನ ಕಾಪಾಡಿಕೊಂಡಿದ್ದು ಇಂಗ್ಲೆಂಡ್‌ನ ಹ್ಯಾರಿ ಕೇನ್. ಒಟ್ಟು ಆರು ಗೋಲುಗಳನ್ನು ಗಳಿಸಿದ್ದಾರೆ. ಅವರ ನಾಯಕತ್ವದಲ್ಲಿ ತಂಡವು ಸೆಮಿಫೈನಲ್‌ಗೆ ಬಂದಿದ್ದು ಇತಿಹಾಸ. ವೇಯ್ನ್ ರೂನಿ, ಡೇವಿಡ್ ಬೆಕ್‌ಹ್ಯಾಮ್ ಅವರ ನಂತರ ಇಂಗ್ಲೆಂಡ್ ಫುಟ್‌ಬಾಲ್ ಕ್ರೀಡೆಗೆ ಲಭಿಸಿದ ಹೊಸ ನಕ್ಷತ್ರ.

## ಈಗರ್ ಮತ್ತು ದೇವರ ಪಾದ

ಅರ್ಜೆಂಟೀನಾದ ಡೀಗೊ ಮರಡೋನಾ ಅವರಿಂದಾಗಿ ದೇವರ ಕೈ ಪ್ರಹಸನವು ಜಗಜ್ಜಾಹೀರಾಗಿತ್ತು. ಆದರೆ ಈ ಬಾರಿ 'ದೇವರ ಪಾದ'ವೂ ಫುಟ್‌ಬಾಲ್‌ನಲ್ಲಿ ದಾಖಲಾಯಿತು.

ಸ್ಪೇನ್ ವಿರುದ್ಧದ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ರಷ್ಯಾದ ಗೋಲ್‌ಕೀಪರ್–ನಾಯಕ ಈಗರ್ ಅಕೀನ್‌ಫೀವ್ ಅವರು ಪೆನಾಲ್ಟಿ ಶೂಟೌಟ್‌ನಲ್ಲಿ ತಮ್ಮ ಕಾಲಿನಿಂದ ಚೆಂಡನ್ನು ತಡೆದು ರಷ್ಯಾದ ಗೆಲುವಿಗೆ ಕಾರಣರಾಗಿದ್ದರು.

ನಿರ್ಣಾಯಕ ಪೆನಾಲ್ಟಿ ಶೂಟ್‌ಔಟ್‌ನಲ್ಲಿ ಸ್ಪೇನ್‌ನ ಇಯಾಗೊ ಆಸ್ಪಸ್ ಅವರು ಒದ್ದ ಚೆಂಡನ್ನು ಹಿಡಿಯಲು ಈಗರ್ ತಮ್ಮ ಬಲಭಾಗಕ್ಕೆ ಜಿಗಿದಿದ್ದರು. ಆದರೆ ಚೆಂಡು ಎಡಭಾಗಕ್ಕೆ ಸಾಗಿತ್ತು. ಅರೆಕ್ಷಣದಲ್ಲಿ ತಮ್ಮ ಕಾಲುಗಳನ್ನು ಗಾಳಿಯಲ್ಲಿಯೇ ಸ್ಟ್ರೆಚ್ ಮಾಡಿದ ಈಗರ್ ಚೆಂಡಿಗೆ ತಡೆಯೊಡ್ಡಿದ್ದರು. ಇದು ಕಣ್ಣು ಬಳುಕಿಸುವಷ್ಟರಲ್ಲಿ ಆಗಿ ಹೋಗಿತ್ತು. ಅಲ್ಲದೇ ತಮ್ಮ ಅಮೋಘ ನಾಯಕತ್ವದ ಬಲದಿಂದ ತಂಡವು ಎಂಟರ ಘಟ್ಟಕ್ಕೆ ತಲುಪಲು ಕಾರಣರಾಗಿದ್ದ ಅವರು ಈಗ ರಷ್ಯಾದ ಅಭಿಮಾನಿಗಳ ಕಣ್ಮಣಿಯಾಗಿದ್ದಾರೆ.

## ಬ್ರೆಜಿಲ್‌ನ ಮತ್ತೊಬ್ಬ ಹೀರೊ ಕುಟ್ಹಿನೊ

ಟೂರ್ನಿ ಆರಂಭವಾಗುವ ಮುನ್ನ ಬ್ರೆಜಿಲ್‌ನಿಂದ ಕೇವಲ ನೇಮರ್ ಅವರೊಬ್ಬರ ಹೆಸರು ಮಾತ್ರ ಹೆಚ್ಚು ಕೇಳಿ ಬರುತ್ತಿತ್ತು. ಆದರೆ, ಟೂರ್ನಿ ಮುಗಿಯುವ ಹೊತ್ತಿಗೆ ಫಿಲಿಪ್ ಕುಟ್ಹಿನೊ ಎಂಬ ಹೆಸರು ಬ್ರೆಜಿಲ್ ಅಭಿಮಾನಿಗಳ ಟೀ ಶರ್ಟ್‌ಗಳ ಮೇಲೆ ರಾರಾಜಿಸತೊಡಗಿತು.

ಮಿಡ್‌ಫೀಲ್ಡರ್ ಫಿಲಿಪ್ ಗುಂಪು ಹಂತದ ನಿರ್ಣಾಯಕ ಪಂದ್ಯದ ಕೊನೆಯ ನಿಮಿಷದಲ್ಲಿ ಕೊಸ್ಟರೀಕಾ ವಿರುದ್ಧ ಹೊಡೆದಿದ್ದ ಗೋಲು ತಂಡವು ಪ್ರೀಕ್ವಾರ್ಟರ್ ಫೈನಲ್ ತಲುಪಲು ನೆರವಾಗಿತ್ತು. ಐದು ಬಾರಿಯ ವಿಶ್ವ ಚಾಂಪಿಯನ್ ಬ್ರೆಜಿಲ್ ಮುಖಭಂಗ ಅನುಭವಿಸುವುದು ಇದರಿಂದ ತಪ್ಪಿತ್ತು



ಸ್ಪೇನ್‌ನ ಈಗರ್ ಅಕೀನ್‌ಫೀವ್

ಈ ಟೂರ್ನಿಯಲ್ಲಿ ಅವರು ಗಳಿಸಿದ್ದು ಎರಡು ಗೋಲು ಮಾತ್ರ. ಆದರೆ ರಕ್ಷಣೆ, ಪಾಸಿಂಗ್ ಮತ್ತು ಅಸಿಸ್ಟಿಂಗ್‌ನಲ್ಲಿ ಅವರು ತೋರಿದ ಕೌಶಲ ಅಮೋಘ.

## ಒಸಾಕೊ ಎಂಬ ಪ್ರತಿಭೆ

ಈ ಬಾರಿ ಏಷ್ಯಾ ಖಂಡದ ಅಭಿಮಾನಿಗಳನ್ನು ಹೆಮ್ಮೆಯಿಂದ ಬೀಗುವಂತೆ ಮಾಡಿದ್ದು ಜಪಾನ್ ತಂಡ. ನಾಕೌಟ್ ಹಂತಕ್ಕೆ ತಲುಪಿ ವಿರೋಚಿತ ಸೋಲು ಅನುಭವಿಸಿದ್ದ ಜಪಾನ್ ತಂಡ ನಾಕೌಟ್ ಹಂತಕ್ಕೆ ಬರಲು ಪ್ರಮುಖ ಕಾರಣ ಫಾರ್ವರ್ಡ್ ಆಟಗಾರ ಯುಯಾ ಒಸಾಕೊ. ಈ ಟೂರ್ನಿಯಲ್ಲಿ ಒಸಾಕೊ ಗಳಿಸಿದ್ದು ಕೇವಲ 1 ಗೋಲು ಮಾತ್ರ. ಆದರೆ ಎದುರಾಳಿಗಳ ದಾಳಿಯನ್ನು ಹಿಮ್ಮೆಟ್ಟಿಸುವಲ್ಲಿ ರಕ್ಷಣಾ ಪಡೆಯೊಂದಿಗೂ ಇವರು ಹೋರಾಡಿದ್ದ ರೀತಿ ಅನನ್ಯವಾಗಿತ್ತು. ಜಪಾನ್ ತಂಡದ ಇಬ್ಬರು ಪ್ರಮುಖ ಅನುಭವಿ ಆಟಗಾರರು ನಿವೃತ್ತಿ ಘೋಷಿಸಿದ್ದಾರೆ. ಒಸಾಕೊ ಈಗ ತಂಡದ ಪ್ರಮುಖ ಆಟಗಾರ.

## ಹಜಾರ್ಡ್ ಎಂಬ ಶಕ್ತಿ

27 ವರ್ಷದ ಹಜಾರ್ಡ್ ತಮ್ಮ ಬಲ ಮತ್ತು ಎಡಗಾಲಿನಲ್ಲಿ ಸಮಬಲ ಹೊಂದಿದ್ದಾರೆ. ಈ ಟೂರ್ನಿಯಲ್ಲಿಯೇ ಅವರು ಗಳಿಸಿರುವ ಎರಡು ಗೋಲುಗಳು ಒಂದು ಬಲ, ಇನ್ನೊಂದ ಎಡಗಾಲಿನಿಂದ ಬಂದಿದ್ದು.

ಚುರುಕಾಗಿ ಚೆಂಡನ್ನು ಪಾಸ್ ಮಾಡುವ, ಪೆನಾಲ್ಟಿ ಏರಿಯಾದಲ್ಲಿ ಡ್ರಿಬಲ್ ಮಾಡುವ ಫಾರ್ವರ್ಡ್ ಆಟಗಾರ ಈಡನ್ ಆಗಿದ್ದಾರೆ. ತಂಡದ ರೊಮೆಲೊ ಲುಕಾಕು ಅವರೊಂದಿಗೆ ಮಿಂಚಿದ ಹಜಾರ್ಡ್ ಬೆಲ್ಜಿಯಂ ಸೆಮಿಫೈನಲ್ ಹಂತಕ್ಕೆ ಬರಲು ಪ್ರಮುಖ ಪಾತ್ರ ವಹಿಸಿದ್ದರು. ●